**ದಿನಾಂಕ : 31-08-2019 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು : ಶ್ರೀ ಬಿ ಎಸ್ ಎ ವಕೀಲರಿಂದ :**

ನಾನು **10** ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ಇವತ್ತು ನನಗೆ ಸಾಕ್ಷ್ಯ ಹೇಳಲು ಬರುವಂತೆ ಯಾರೂ ಹೇಳಿರುವುದಿಲ್ಲ, ನಾನೇ ಬಂದಿದ್ದೇನೆ. ಕೋರ್ಟಿನಿಂದ ನನಗೆ ಸಾಕ್ಷ್ಯ ಹೇಳಲು ಬರುವಂತೆ ಸಮನ್ಸ ವಗೈರೆ ಬಂದಿಲ್ಲ. ಇವತ್ತು ಪ್ರಕರಣದಲ್ಲಿ ಸಾಕ್ಷ್ಯ ಇರುತ್ತದೆಂದು ನನಗೆ ರಾಘವೇಂದ್ರ ಹೇಳಿರುತ್ತಾರೆ. ರಾಘವೇಂದ್ರ ನನಗೆ ಬ್ಯಾಡಗಿಗೆ ಬರಲು ಹೇಳಿದ್ದಾರೆ. ಸಾಕ್ಷಿ ಪ್ರಮಾಣ ಪತ್ರ ಬರೆಯಲು ನಾನೇ ಮಾಹಿತಿ ಕೊಟ್ಟಿರುತ್ತೇನೆ ಪ್ರಮಾಣ ಪತ್ರದಲ್ಲಿ ಬರೆದ ಎಲ್ಲ ವಿಷಯದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ ಅಲ್ಲ. ನಾನು ಮತ್ತು ಭಗವಂತಪ್ಪ ಬಹಳ ಅನ್ಯೋನ್ಯವಾಗಿ ಇರುತ್ತೇವೆ ಎಂದರೆ ಸರಿ. ನನಗೆ ಬೇಸಾಯ ಹೊರತು ಪಡಿಸಿ ಬೇರೆಯವರ ಮನೆತನದ ಬಗ್ಗೆ ಮತ್ತು ಅವರ ಆಸ್ತಿಗಳ ಬಗ್ಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ ಅಲ್ಲ. ನಮಗೆ ಇದ್ದ ಜಮೀನಿನ ಸರ್ವೆ ನಂಬರು ಮತ್ತು ಅದರ ವಿಸ್ತೀರ್ಣ ಹೇಳಲು ಆಗುತ್ತದೆ. ನಮ್ಮ ಜಮೀನಿಗೆ ಹೊಂದಿಕೊಂಡು ವಾದಿ ಮತ್ತು ಪ್ರತಿವಾದಿಯರ ಆಸ್ತಿಗಳು ಇರುವುದಿಲ್ಲ ಎಂದರೆ ಸರಿ ಅಲ್ಲ. ವಾದಿ ಪ್ರತಿವಾದಿಯರ ಆಸ್ತಿಗಳು ನಮ್ಮ ಜಮಿನಿಗೆ ಹೊಂದಿಕೊಂಡು ಇಲ್ಲದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ಭಗವಂತಪ್ಪ ಕಮ್ಮಾರ ಎಂದೂ ಬೇಸಾಯ ಮಾಡಿದವರು ಇರುವುದಿಲ್ಲ ಎಂದರೆ ಸರಿ ಅಲ್ಲ. ಈ ಕೇಸು ರುಕ್ಮವ್ವ ಭಗವಂತಪ್ಪನ ಮೇಲೆ ಮಾಡಿದ್ದಾರೆ. ಕಮ್ಮಾರ ಮನೆತನಕ್ಕೆ ಆಸ್ತಿಗಳು ಹೇಗೆ ಬಂದಿರುತ್ತವೆ ಎನ್ನುವ ವಕೀಲರ ಪ್ರಶ್ನೆಗೆ ಸಾಕ್ಷಿ ಆಗ ಹೇಗೆ ಬಂದಿರುತ್ತವೆ ತಮಗೆ ಗೊತ್ತಿಲ್ಲ ಎಂದು ಹೇಳಿರುತ್ತಾರೆ. ರುದ್ರಪ್ಪ ಕಮ್ಮಾರ ಇವರಿಂದ ಬಂದಿರುವ ಆಸ್ತಿಗಳು ಇರುತ್ತವೆ ಎಂದರೆ ಸರಿ. ರುದ್ರಪ್ಪ ಕಮ್ಮಾರ ಇವರಿಗೆ **4** ಜನ ಗಂಡು ಮಕ್ಕಳು, **4** ಮಂದಿ ಹೆಣ್ಣು ಮಕ್ಕಳು ಇರುತ್ತಾರೆ. ಹೆಣ್ಣು ಮಕ್ಕಳ ಹೆಸರುಗಳು **1.** ಬಾಗವ್ವ **2.** ರುಕ್ಮವ್ವ **3.** ಶಾಂತವ್ವ ಇದ್ದು **4** ನೇಯವಳ ಹೆಸರು ನೆನಪು ಬರುತ್ತಿಲ್ಲ. ಗಂಡು ಮಕ್ಕಳ ಹೆಸರುಗಳು **1.** ಭಗವಂತಪ್ಪ **2.** ಪ್ರಹ್ಲಾದಪ್ಪ **3.** ಗಣೇಶಪ್ಪ **4.** ವೀರಭದ್ರಪ್ಪ ಇರುತ್ತವೆ. ರುದ್ರಪ್ಪ ಕಮ್ಮಾರ ಇವರ ಕಾಲದಿಂದಲೇ ವಾದಿ ಪ್ರತಿವಾದಿಯರು ದಾವಾದ ಆಸ್ತಿಗಳನ್ನು ಸಾಮೂಹಿಕವಾಗಿ ವಹಿವಾಟು ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿ ಅಲ್ಲ. ಸಾಕ್ಷಿ ಸನ್ **1981** ನೇ ಇಸ್ವಿಯವರೆಗೆ ಕೂಡಿ ಇದ್ದರೆಂದು ನಂತರ ಅವರು ಆಸ್ತಿಗಳನ್ನು

ಹಂಚಿಕೊಂಡಿದ್ದಾರೆಂದು ಹೇಳಿರುತ್ತಾರೆ. ವಾದಿ ಪ್ರತಿವಾದಿಯರು ಆಸ್ತಿಗಳನ್ನು ಲಾವಣಿ ಹಾಕಿದ್ದಾರೆ ಎಂದರೆ ಸರಿ ಅಲ್ಲ. ನನ್ನ ಪ್ರಮಾಣ ಪತ್ರದ ಪ್ಯಾರಾ ನಂಬರು **3** ರಲ್ಲಿ ಬರೆದ ಎಲ್ಲ ವಿಷಯಗಳು ಸುಳ್ಳು ಇರುತ್ತವೆ ಎಂದರೆ ಸರಿ ಅಲ್ಲ. ಮೂಲ ಪುರುಷ ರುದ್ರಪ್ಪ ಇವರೇ ಹೆಣ್ಣು ಮಕ್ಕಳ ಮದುವೆ ಮಾಡಿಕೊಟ್ಟಿದ್ದಾರೆ ಎಂದರೆ ಸರಿ. ವಾದಿಯರನ್ನು ರುದ್ರಪ್ಪನ ಖಾಸ ತಂಗಿಯ ಮಗನಾದ ಜಕಣಾಚಾರಿ ಇವರಿಗೆ ಕೊಟ್ಟು ಮದುವೆ ಮಾಡಲಾಗಿದೆ ಎಂದರೆ ಸರಿ. ವಾದಿಯರ ಮದುವೆಯ ಮಾತುಕತೆಯಲ್ಲಿ ನಾನು ಇದ್ದೆ. ಮದುವೆಯ ಮಾತುಕತೆಯಲ್ಲಿ ಶಾಂತಪ್ಪ ಹೊಸಗೌಡ್ರ, ಗುರುಶಾಂತಪ್ಪ ಬಡ್ಡಿ , ಚಂದ್ರಪ್ಪ ಬಡಿಗೇರ ಇತ್ಯಾದಿ ಇದ್ದರು. ಮದುವೆಯ ಕಾಲಕ್ಕೆ ಹೆಣ್ಣು ಮಕ್ಕಳಿಗೆ ತಲಾ **10** ತೊಲೆ ಬಂಗಾರ ಮತ್ತು **1** ಲಕ್ಷ ರೂಪಾಯಿ ಕೊಡುವ ಮಾತುಕತೆ ಆಗಿದ್ದು ಅದನ್ನು ಕೊಟ್ಟು ಮುಗಿಸಿದ್ದಾರೆ. ಹೆಣ್ಣು ಮಕ್ಕಳಿಗೆ ಬಂಗಾರ ಮತ್ತು ಹಣ ಕೊಡುವ ಬಗ್ಗೆ ಮಾತಾಡಿದ ಬಗ್ಗೆ ಬರವಣಿಗೆ ಆಗಿದ್ದು ಅದನ್ನು ಕೋರ್ಟಿಗೆ ಹಾಜರು ಪಡಿಸಿದ್ದಾರೋ ಇಲ್ಲವೋ ಗೊತ್ತಿಲ್ಲ. ವಾದಿಯರಿಗೆ ಮದುವೆಯಲ್ಲಿ ಯಾವುದೇ ಹಣ, ಬಂಗಾರ ವರೋಪಚಾರ ನೀಡದೇ ಸರಳವಾಗಿ ಮದುವೆ ಮಾಡಿಕೊಡಲಾಗಿದೆ ಎಂದರೆ ಸರಿ ಅಲ್ಲ. ನನ್ನ ಪ್ರಮಾಣ ಪತ್ರದ **4** ನೇ ಪ್ಯಾರಾನಲ್ಲಿ ಹೇಳಿದ ಎಲ್ಲ ಸಂಗತಿಗಳು ಸುಳ್ಳು ಇರುತ್ತವೆ ಎಂದರೆ ಸರಿ ಅಲ್ಲ. ವಾದಿ ಪ್ರತಿವಾದಿಯರು ಇಂದಿನವರೆಗೂ ಸಾಮೂಹಿಕ ಕಬ್ಜಾ ವಹಿವಾಟು ಹೊಂದಿದ್ದರೂ ಹೊಂದಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ದಾವಾದ ಆಸ್ತಿಗಳಲ್ಲಿ ಇಂದಿಗೂ ವಾದಿ ಪ್ರತಿವಾದಿಯರ ನಡುವೆ ಹಿಸ್ಸೆ ದಿಸ್ಸೆ ಆಗಿಲ್ಲ ಎಂದರೆ ಸರಿ ಅಲ್ಲ. ಸನ್ **1981** ರಲ್ಲಿ ಹಿಸ್ಸೆ ಆಗಿರುತ್ತದೆ. ಹಿಸ್ಸೆ ಆಗುವ ಕಾಲಕ್ಕೆ ನಾನು ಹಾಜರಿದ್ದೆ. ಯಾರ ಯಾರ ನಡುವೆ ಹಿಸ್ಸೆ ಆಗಿರುತ್ತದೆ ಹೇಳಲು ನನಗೆ ಆಗುತ್ತದೆ. ವಾಟ್ನಿ ಪತ್ರ ಆಗಿರುತ್ತದೆ ವಾಟ್ನಿ ಕಾಲಕ್ಕೆ **1.** ಶಾಂತಪ್ಪಜ್ಜ ಹೊಸಗೌಡ್ರ **2.** ಗುರುಶಾಂತಪ್ಪ ಗಡ್ಡಿಯವರ **3.** ಚಂದ್ರಪ್ಪ ಬಡಿಗೇರ **4.** ತಿರಕಪ್ಪ ಗಾಣಿಗೇರ ಹಾಜರು ಇದ್ದರು. ನಾನು ಕೂಡಾ ಪಂಚಾಯತಿಯಲ್ಲಿ ಹಾಜರು ಇದ್ದೆ. ರಿ ಸ ನಂ **140** ರ ಆಸ್ತಿಯಲ್ಲಿ ಎಲ್ಲ **4** ಜನರು ಹಿಸ್ಸೆ ಪಡೆದಿರುತ್ತಾರೆ. ಇನ್ನೊಂದು **10** ಎಕರೆ ವಿಸ್ತೀರ್ಣದ ಸ ನಂ **99** ರಲ್ಲಿ ಕೂಡಾ ಎಲ್ಲ **4** ಜನರೂ ಹಿಸ್ಸೆ ಪಡೆದಿದ್ದಾರೆ. ನನ್ನ ಪ್ರಮಾಣ ಪತ್ರದಲ್ಲಿ ಸನ್ **1981** ನೇ ಸಾಲಿನಲ್ಲಿ ಹಿಸ್ಸೆ ಆಗಿರುತ್ತದೆಂದು ಸಂಪೂರ್ಣ ಸುಳ್ಳು ಬರೆಸಿದ್ದೇನೆ ಎಂದರೆ ಸರಿ ಅಲ್ಲ. ಸನ್ **1981** ರಲ್ಲಿ ಯಾವುದೇ ವಾಟ್ನಿ ಆಗಿಲ್ಲದಿದದ್ದಿರೂ ಆಗಿರುತ್ತದೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. **1-4** ನೇ ಪ್ರತಿವಾದಿಯರು ತಮ್ಮ ಹಿಸ್ಸೆಯ ಆಸ್ತಿಗಳಲ್ಲಿ ಪ್ರತ್ಯೇಕ ಕಬ್ಜಾ ವಹಿವಾಟು ಹೊಂದಿರುತ್ತಾರೆ ಎಂದು ಸುಳ್ಳು ಹೇಳಿಸಿ ಬರೆಸಿದ್ದೇನೆ

ಎಂದರೆ ಸರಿ ಅಲ್ಲ. ಅದೇ ರೀತಿ ಹೆಣ್ಣು ಮಕ್ಕಳಿಗೆ ತಲಾ ರೂಪಾಯಿ **1** ಲಕ್ಷ ಹಣ ಕೊಟ್ಟಿರುತ್ತಾರೆಂದು ಸುಳ್ಳು ಹೇಳಿಸಿ ಬರೆಸಿದ್ದೇನೆ ಎಂದರೆ ಸರಿ ಅಲ್ಲ. ದಾವಾದ ಆಸ್ತಿಯ ದಾಖಲೆಗಳನ್ನು ನೋಡಿರುತ್ತೇನೆ. ದಾವಾದ ಆಸ್ತಿಗಳು ರುದ್ರಪ್ಪನ ಹೆಸರಿನಲ್ಲಿ ಮೊದಲು ಇದ್ದು ನಂತರ ಅವರ ಮಕ್ಕಳು ತಮ್ಮ ಹೆಸರಿಗೆ ಖಾತೆ ಮಾಡಿಕೊಂಡಿರುತ್ತಾರೆ. ಮಕ್ಕಳ ಹೆಸರಿಗೆ ಖಾತೆ ಆಗಿರುವ ಬಗ್ಗೆ ಡ ನೋಡಿದ್ದು ಡ ನಂಬರು ಗೊತ್ತಿಲ್ಲ. ಪ್ರತಿವಾದಿಯರು ಖೊಟ್ಟಿ ಡ ಉತಾರೆ ಮಾಡಿಕೊಂಡಿದ್ದಾರೆ ಎಂದರೆ ಸರಿ ಅಲ್ಲ. ಹಿಸ್ಸೆ ಆಗಿರುತ್ತದೆಂದು ಮತ್ತು ನಾನು ಹಾಗೂ ಉಳಿದವರು ಆಗ ಹಾಜರು ಇದ್ದೇವೆಂದು ಹಾಗೂ ಆಗ ವಾಟ್ನಿ ಪತ್ರ ಆಗಿರುತ್ತದೆಂದು ಸಂಪೂರ್ಣ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ಡ ಯಾವಾಗ ಮಂಜೂರು ಆಗಿರುತ್ತದೆ ವಗೈರೆ ಹೇಳಲು ಆಗುವುದಿಲ್ಲ. ವಾದಿ ಪ್ರತಿವಾದಿಯರು ಇವತ್ತಿಗೂ ಸಾಮೂಹಿಕವಾಗಿ ದಾವಾದ ಆಸ್ತಿಗಳಲ್ಲಿ ಕಬ್ಜಾ ವಹಿವಾಟು ಹೊಂದಿರುವ ವಿಷಯ ನನಗೆ ಗೊತ್ತಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ನನ್ನ ಮತ್ತು ವಾದಿಯರ ನಡುವೆ ಮನಸಾ ಮನಸಾ ಸರಿ ಇರುವುದಿಲ್ಲ ಎಂದರೆ ಸರಿ . ಈ ಕಾರಣಕ್ಕೆ ನಾನು ವಾದಿಯರ ವಿರುದ್ಧ ಸುಳ್ಳು ಸಾಕ್ಷು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ನಾನು ಭಗವಂತಪ್ಪ ಇವರ ಜೊತೆಯಲ್ಲಿ ಬಹಳ ಅನ್ಯೋನ್ಯವಾಗಿ ಇದ್ದುದರಿಂದ ಅವರ ಪರವಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ನನಗೆ ಈ ಹಿಂದೆ ಆರೋಗ್ಯ ಸರಿ ಇರದೇ ಇದ್ದ ಕಾರಣಕ್ಕೆ ಭಗವಂತಪ್ಪ ನನಗೆ ಆಸ್ಪತ್ರೆಗೆ ಕರೆದುಕೊಂಡು ಹೋಗುವುದು ಚಿಕಿತ್ಸೆ ಕೊಡಿಸುವುದು ಮತ್ತು ಹಣ ಕೊಡುವುದು ಮಾಡುತ್ತಿದ್ದರು ಎಂದರೆ ಹಾಗೂ ಈ ಎಲ್ಲ ಕಾರಣಗಳಿಗಾಗಿ ನಾನು ಭಗವಂತಪ್ಪನ ಪರವಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ವಾದಿ ಮತ್ತು ಪ್ರತಿವಾದಿಯರ ನಡುವೆ ಇವತ್ತಿಗೂ ಹಿಸ್ಸೆ ದಿಸ್ಸೆ ಆಗಿಲ್ಲವೆಂದು ಗೊತ್ತಿದ್ದರೂ ಸಹ ಭಗವಂತಪ್ಪನಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೆ.ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ, ಬ್ಯಾಡಗಿ.